ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ದೇವರಾಜ | ಪಿ.ಡಬ್ಲ್ಯೂ. | 9 |
| ತಂದೆಯಹೆಸರು | : | ಶರಣಪ್ಪ | ಸಿ.ಡಬ್ಲ್ಯೂ. | 16 |
| ವಯಸ್ಸು | : | 40 ವರ್ಷ | | |
| ಉದ್ಯೋಗ | : | ಪೋಲೀಸ್ ಪೇದೆ, ಜಾಗೃತದಳ, ಬೆಸ್ಕಾಂ, ದಾವಣಗೆರೆ | | |
| ವಾಸ ಸ್ಥಳ | : | ದಾವಣಗೆರೆ | | |

ದಿ.20.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>** :

1. ದಿ.16.09.2017 ರಿಂದ ದಿ.10.07.2022 ರ ವರೆಗೆ ನಾನು ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕೆಲಸ ಮಾಡಿರುತ್ತೇನೆ.

2. ದಿ.26.12.2019 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ, ದಾಳಿಗೆ ಹೋಗಬೇಕೆಂದು ನನಗೆ ಕರೆದು ಹೇಳಿದರು. ಆ ಪ್ರಕಾರ ಆ ದಿನ ನಾವು ಚಾಸಾ-1 ರವರ ಜೊತೆಯಲ್ಲಿ ಘಟನಾ ಸ್ಥಳಕ್ಕೆ ನಾವು, ಪಂಚರು ಮತ್ತು ಸಿಬ್ಬಂದಿಗಳು ಹೋದೆವು.

3. ಸ್ಥಳದಲ್ಲಿ ತನಿಖೆ ಮತ್ತು ಅಮಾನತ್ತು ಮಹಜರು ಕ್ರಮ ಜರುಗಿಸುವಾಗ ಪೋಟೋಗಳನ್ನು ತೆಗೆಯಲು ಮತ್ತು ವೀಡಿಯೋ ಮಾಡುವಂತೆ ನನಗೆ ತಿಳಿಸಿದ್ದರು. ಮಹಜರು ಕ್ರಮವನ್ನು ಮಧ್ಯಾಹ್ನ 12.40 ರಿಂದ 2.30 ಗಂಟೆಯವರೆಗೆ ಮಾಡಲಾಯಿತು. ನಿಪಿ-11 ರಿಂದ ನಿಪಿ-21 ರ ವರೆಗಿನ ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ಡಿವಿಡಿಗೆ ಅಳವಡಿಸಿದ್ದು, ಸದರಿ ಡಿವಿಡಿಯನ್ನು ಆರೋಪಿತರ ಪರ ವಕೀಲರ ಆಕ್ಷೇಪಣೆ ಇಲ್ಲದೆ ಇರುವುದರಿಂದ **ನಿಪಿ-35** ಎಂದು

ಗುರುತಿಸಲಾಯಿತು. ಸದರಿ ಪೋಟೋಗಳಿಗೆ ಸಂಬಂಧಿಸಿದಂತೆ ಕಲಂ 65(ಬಿ) ಅಡಿ ಪ್ರಮಾಣ ಪತ್ರವನ್ನು ಕೊಟ್ಟಿದ್ದು, ಅದನ್ನು **ನಿಪಿ-36** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-36(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

4. ಎಂ.ಓ.3 ಮತ್ತು ಎಂ.ಓ.4 ನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಅಮಾನತ್ತು ಪಡಿಸಿಕೊಂಡ ಹಣವನ್ನು ಎಂ.ಓ.2 ಎಂದು ಈಗಾಗಲೇಗುರುತಿಸಲಾಗಿದೆ.

**ಪಾಟೀ ಸವಾಲು ಃ ಶ್ರೀ ಕೆ.ಎಚ್.ವಿ. ವಕೀಲರಿಂದ ಆರೋಪಿತರ ಪರವಾಗಿ** ಃ

5. ಈ ಪ್ರಕರಣದಲ್ಲಿ ತನಿಖಾಧಿಕಾರಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ಎಲ್ಲಾ ಪೋಟೋಗಳನ್ನು ನಾನೊಬ್ಬನೇ ತೆಗೆದಿದ್ದೇನೆ. ನಿಪಿ-34 ಎಂದು ಗುರುತಿಸಲಾದ ಪೋಟೋವನ್ನು ನಾನು ತೆಗೆದಿಲ್ಲ. ನಿಪಿ-34 ರ ಪೋಟೋವನ್ನು ಯಾರು ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಪೋಟೋಗಳನ್ನು ಚಾಸಾ.1 ರವರಿಗೆ ಸೇರಿದ ಸ್ಯಾಮ್ ಸಂಗ್ ಮೊಬೈಲಿನಿಂದ ತೆಗೆದಿದ್ದೇನೆ. ಸದರಿ ಪೋಟೋಗಳನ್ನು ಚಾಸಾ.1 ರವರ ಮೊಬೈಲ್ ಪೋನಿನಿಂದ ತೆಗೆದಿದ್ದೇನೆ ಎಂದು ತನಿಖಾಧಿಕಾರಿ ಮುಂದೆ ಕೊಟ್ಟ ಹೇಳಿಕೆಯಲ್ಲಿ ಹೇಳಿರುತ್ತೇನೆ.

6. ಆರೋಪಿತರು ಗಾಂಜಾ ಮಾರಾಟ ಮಾಡುತ್ತಿರುವುದನ್ನು ದೂರದಲ್ಲಿ ನಿಂತು ಗಮನಿಸುತ್ತಿದ್ದೆವು ಎಂದು ಹೇಳಿದ ಸಂದರ್ಭದಲ್ಲಿ ಆರೋಪಿತರ ಪೋಟೋ ತೆಗೆದಿಲ್ಲ. ಚಾಸಾ-13 ರವರು ಆರೋಪಿತರಿಂದ ಗಾಂಜಾ ಖರೀದಿಸುತ್ತಿರುವ ಸಂದರ್ಭದಲ್ಲಿ ಪೋಟೋ ತೆಗೆದಿಲ್ಲ. ಸ್ಯಾಮ್ ಸಂಗ್ ಮೊಬೈಲಿನಲ್ಲಿ ತೆಗೆದಿರುವ ಪೋಟೋಗಳನ್ನು ನಮ್ಮ ಠಾಣೆಯ ಕಂಪ್ಯೂಟರಿಗೆ ಅಳವಡಿಸಿ, ಡಿವಿಡಿಯಲ್ಲಿ ಸಂಗ್ರಹಿಸಿ, ಸದರಿ ಡಿವಿಡಿಯಿಂದ ರಾಘವೇಂದ್ರ ಕಲರ್ ಲ್ಯಾಬ್ ನಲ್ಲಿ ಪ್ರಿಂಟ್ ಹಾಕಿಸಿದ್ದೇನೆ.

7. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಪೋಟೋಗಳನ್ನು ತೆಗೆಯುವ ಸಂದರ್ಭದಲ್ಲಿ ಪೋಟೋ ತೆಗೆದ ಸ್ಥಳದಿಂದ ಅಶೋಕ ಹೋಟೆಲ್ 60 ರಿಂದ 80 ಅಡಿ ದೂರ ಇತ್ತು. ಕೆ.ಎಸ್.ಆರ್.ಟಿ.ಸಿ.

ಬಸ್ ನಿಲ್ದಾಣ ಅಶೋಕ ಹೋಟೆಲ್ ನ ಹಿಂಭಾಗ ಇತ್ತು. ಇಂದಿರಾ ಕ್ಯಾಂಟೀನ 60 ಅಡಿ ದೂರ ಇತ್ತು. ನಾನು ಫೋಟೋ ತೆಗೆದ ಸಂದರ್ಭದಲ್ಲಿ 1ನೇ ಆರೋಪಿ ಶರ್ಟು ಮತ್ತು ಪ್ಯಾಂಟ್ ಧರಿಸಿದ್ದರು. ಮಹಜರು ಸಂದರ್ಭದಲ್ಲಿ ಫೋಟೋಗಳನ್ನು ನಾನೇ ತೆಗೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.